ಬವಿಕಂ
BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ: ಸಕಾನಿಇಂ/ಸಇಂ(ತಾ)/ದೊ.ಪುರ/2023-24/ 7389-95

ಕಛೇರಿಯಿಂದ,
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ನಗರ ಉಪ-ವಿಭಾಗ,
ಬೆ.ವಿ.ಕಂ,ದೊಡ್ಡಬಳ್ಳಾಪುರ
ದಿನಾಂಕ: 19/3/24

**ಸಭಾನಡವಳಿಗಳು**

ದಿನಾಂಕ:16.03.2024ರಂದು ನಗರ ಉಪವಿಭಾಗ, ದೊಡ್ಡಬಳ್ಳಾಪುರ ಕಛೇರಿಯಲ್ಲಿ ಸಹಾಯಕ ಲೆಕ್ಕಾಧಿಕಾರಿಗಳು ಬೆವಿಕಂ, ದೊಡ್ಡಬಳ್ಳಾಪುರ ರವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಕುಂದುಕೊರತೆಯ ಸಭೆ ಹಾಗೂ ಸುರಕ್ಷತಾ ಸಭೆ ಹಮ್ಮಿಕೊಳ್ಳಲಾಗಿತ್ತು. ಈ ಸಭೆಯಲ್ಲಿ ಕೆಳಕಂಡವರು ಭಾಗವಹಿಸಿರುತ್ತಾರೆ.

1. ಸಹಾಯಕ ಲೆಕ್ಕಾಧಿಕಾರಿ, ದೊಡ್ಡಬಳ್ಳಾಪುರ ನಗರ ಉಪವಿಭಾಗ, ದೊಡ್ಡಬಳ್ಳಾಪುರ.
2. ದೊಡ್ಡಬಳ್ಳಾಪುರ ನಗರ ಉಪವಿಭಾಗದ ಎಲ್ಲಾ ಶಾಖಾಧಿಕಾರಿಗಳು, ಬೆವಿಕಂ.
   (O&M-1,O&M-2,ಬಾಶೆಟ್ಟಿಹಳ್ಳಿ, ಮೇಳೇಕೋಟೆಕ್ರಾಸ್)

**ಸಭೆಯಲ್ಲಿ ಉಪಸ್ಥಿತರಿದ್ದ ಗ್ರಾಹಕರ ಹೆಸರು ಮತ್ತು ಸ್ಥಳ:**

1. ಮುನಿನಾರಾಯಣಪ್ಪ:ಹೆಗ್ಗಡಿಹಳ್ಳಿ:9342527546
2. ಧನಂಜಯ:ಗಂಟಿಗಾನಹಳ್ಳಿ:9353039293
3. ಹೆಚ್ ವಿ ರವಿಕುಮಾರ್:ಹೆಗ್ಗಡಿಹಳ್ಳಿ:9342155629
4. ಕೆ ನಾಗೇಶ್: ದೊಡ್ಡಬಳ್ಳಾಪುರ:9741232694
5. ಸುನೀಲ್‌ಕುಮಾರ್:ದೊಡ್ಡಬಳ್ಳಾಪುರ:9341478463
6. ಮುಕ್ತರ್‌ಅಹಮದ್:ದೊಡ್ಡಬಳ್ಳಾಪುರ:9945674153
7. ದರ್ಗಾಜೋಗಿಹಳ್ಳಿ ಹೈಟೆಕ್ ಬಡಾವಣೆಯ ನೇಕಾರರು ದೊಡ್ಡಬಳ್ಳಾಪುರ

ಮೇಲ್ಕಂಡವರ ಉಪಸ್ಥಿತಿಯಲ್ಲಿ ಗ್ರಾಹಕರ ಕುಂದುಕೊರತೆಯ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಚರ್ಚಿಸಲಾದ ವಿವರಗಳು ಈ ಕೆಳಕಂಡಂತಿವೆ.

1. 1. ಶ್ರೀ ಮುನಿನಾರಾಯಣಪ್ಪ ಹೆಗ್ಗಡಿಹಳ್ಳಿ ರವರು ಮಾತನಾಡಿ, TF02- TAPASIPURA ಮತ್ತು TF06-MACHAGONDANAHALLI FEEDERನಲ್ಲಿ ಪದೇ ಪದೇ ವಿದ್ಯುತ್ ಅಡಚಣೆಯಾಗುತ್ತಿದ್ದು, ಇದರಿಂದ ನಮಗೆ ತುಂಬಾ ತೊಂದರೆಯಾಗುತ್ತಿದ್ದು, ಹಾಗೂ ವಿದ್ಯುತ್ ಅಡಚಣೆಯಾದ ಸಮಯದಲ್ಲಿನ ವಿದ್ಯುತ್‌ನ್ನು ಬೇರೆ ವೇಳೆಯಲ್ಲಿ ನೀಡಬೇಕೆಂದು, ಹಾಗೂ ಬೇರೆ ವೇಳೆಯಲ್ಲಿ ವಿದ್ಯುತ್ ಸರಬರಾಜು ನೀಡಿದಲ್ಲಿ ರೈತರಿಗೆ ತುಂಬಾ ಅನುಕೂಲವಾಗುತ್ತದೆಯೆಂದು ತಿಳಿಸಿದರು. ಹಾಗೂ ಶಾಖಾಧಿಕಾರಿಗಳು ಮೇಳೆಕೋಟೆ ಕ್ರಾಸ್ ರವರಿಗೆ ಹಾಗೂ Camp ಮಾರ್ಗದಾಳುಗಳಿಗೆ ರಾತ್ರೀ ವೇಳೆ ವಿದ್ಯುತ್ ಅಡಚಣೆಯಾಗುತ್ತಿರುವುದರ ಬಗ್ಗೆ ನಾವು ತಿಳಿಯಲು ದೂರವಾಣಿ ಕರೆ ಮಾಡಿದರೆ ಕರೆಯನ್ನು ಸ್ವೀಕರಿಸುವುದಿಲ್ಲವೆಂದು ದೂರಿದರು.

- ಶಾಖಾಧಿಕಾರಿಗಳು ಮೇಳೆಕೋಟೆ ಕ್ರಾಸ್ ರವರು ಮಾತನಾಡಿ, 66/11ಕೆವಿ ತೂಬಗೆರೆ ಉಪವಿದ್ಯುತ್ ಕೇಂದ್ರದ ಒಂದು ವಾರದ Log Book ಪ್ರತಿಯನ್ನು ತಂದಿದ್ದು, Log Bookನಲ್ಲಿ ದಾಖಲಾಗಿರುವ ವಿವರಗಳನ್ನು ಸಭೆಯಲ್ಲಿ ಪ್ರಸ್ತಾಪಿಸಿ, ಸದರಿ 11ಕೆವಿ ವಿದ್ಯುತ್ ಮಾರ್ಗದಲ್ಲಿನ ವಿದ್ಯುತ್ ಅಡಚಣೆ ಉಂಟಾಗಿರುವುದರ ಬಗ್ಗೆ ಮನವರಿಕೆ ಮಾಡಲಾಯಿತು.
- ಶಾಖಾಧಿಕಾರಿಗಳು ಮೇಳೆಕೋಟೆ ಕ್ರಾಸ್ ರವರು ಮಾತನಾಡಿ ವಿದ್ಯುತ್ ಅಡಚಣೆಯಾಗುತ್ತಿರುವುದರ ಬಗ್ಗೆ ಗ್ರಾಹಕರಿಗೆ ತಿಳಿಸಲಾಗುವುದೆಂದು ತಿಳಿಸಿದರು.

2. ಶ್ರೀ ಧನಂಜಯ ಗಂಟಿಗಾನಹಳ್ಳಿರವರು ಮಾತನಾಡಿ,TF02-TAPASIPURA ವಿದ್ಯುತ್ ಮಾರ್ಗದಲ್ಲಿ ರಾತ್ರೀ ವೇಳೆಯಲ್ಲಿ ಪದೇ ಪದೇ ವಿದ್ಯುತ್ ವ್ಯತ್ಯಯವಾಗುತ್ತಿರುತ್ತದೆ, ಹಾಗೂ ಗ್ರಾಮದಲ್ಲಿನ ಬೀದಿ ನಾಯಿಗಳಿಂದ ಸಾಕುಪ್ರಾಣಿಗಳಿಗೆ ಹಾಗೂ ನಾಗರೀಕರಿಗೆ ಪ್ರಾಣಾಪಾಯವಾಗುವುದೆಂದು ದೂರಿದರು.

- ಶಾಖಾಧಿಕಾರಿಗಳು ಮೇಳೆಕೋಟೆ ಕ್ರಾಸ್ ದೊಡ್ಡಬಳ್ಳಾಪುರ ನಗರ ಉಪವಿಭಾಗರವರು ಮಾತನಾಡಿ, ಈ ಬಗ್ಗೆ ಕಂಪನಿಯಿಯಾಮಾನುಸಾರ ವಿದ್ಯುತ್ ವ್ಯತ್ಯಯವಾಗದಂತೆ ಸೂಕ್ತಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

3. ದರ್ಗಾಜೋಗಿಹಳ್ಳಿ ಹೈಟೆಕ್ ಬಡಾವಣೆಯ ನೇಕಾರರು ದೊಡ್ಡಬಳ್ಳಾಪುರ ರವರು ಮಾತನಾಡಿ, ದರ್ಗಾಜೋಗಿಹಳ್ಳಿವ್ಯಾಪ್ತಿಗೆ ಒಳಪಡುವ ಹೈಟೆಕ್ ಬಡಾವಣೆಯಲ್ಲಿನ ಪರಿವರ್ತಕದ ಸಂಖ್ಯೆ 10002005194ಮಾರ್ಗದಿಂದ ಹೈಟೆಕ್ ಬಡಾವಣೆಗೆ ವಿದ್ಯುತ್ ನೀಡಲಾಗುತ್ತಿದ್ದು, ಹಾಗೂ ಪರಿವರ್ತಕದಿಂದ ರಾಗಿ ಗಿರಣಿ, ನಿವೇಶನಗಳು, ಮೂರು ಬೋರ್‌ವೆಲ್‌ಗಳು, ಮತ್ತು ವಿದ್ಯುತ್ ಚಾಲಿತ ಮಗ್ಗಗಳು ಅಧಿಕವಾಗಿರುವುದರಿಂದ ಪದೇ ಪದೇ ವಿದ್ಯುತ್ Low Voltage ಸಮಸ್ಯೆಯಾಗುತ್ತಿದ್ದು, ಇದರಿಂದ ನೇಕಾರರಿಗೆ ತುಂಬಾತೊಂದರೆಯಾಗುತ್ತಿರುತ್ತದೆಯೆಂದು, ಹಾಗೂ ಅಧಿಕ ಪರಿವರ್ತಕವನ್ನು ಅಳವಡಿಸುವಂತೆ ದೂರಿದರು.

- ಸಹಾಯಕ ಲೆಕ್ಕಾಧಿಕಾರಿಗಳು ದೊಡ್ಡಬಳ್ಳಾಪುರ ನಗರ ಉಪವಿಭಾಗರವರು ಮಾತನಾಡಿ, ಈ ಬಗ್ಗೆ ಸಹಾಯಕ ಇಂಜಿನಿಯರ್(ವಿ), ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನಾ ಘಟಕ-1 ದೊಡ್ಡಬಳ್ಳಾಪುರ ನಗರ ಉಪವಿಭಾಗ, ರವರಿಗೆ ತಿಳಿಸಿ ಸ್ಥಳ ಪರಿಶೀಲಿಸಿ ಕಂಪನಿನಿಯಾಮಾನುಸಾರ ಸೂಕ್ತಕ್ರಮಕೈಗೊಂಡು ಅಂದಾಜು ಪಟ್ಟಿಯನ್ನು ತಯಾರಿಸಿ, ಮೇಲಾಧಿಕಾರಿಗಳಿಗೆ ತಿಳಿಸಲಾಗುವುದೆಂದು ತಿಳಿಸಿದರು.

ಸಭೆಯಲ್ಲಿದ್ದ ಎಲ್ಲರಿಗೂ ಧನ್ಯವಾದವನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಬೆವಿಕಂ(ವಿ),ನಗರ ಉಪ-ವಿಭಾಗ, ದೊಡ್ಡಬಳ್ಳಾಪುರ

<u>ಪ್ರತಿಗಳನ್ನು ಕೆಳಕಂಡವರ ಅವಗಾಹನೆಗಾಗಿ ಸಲ್ಲಿಸಲಾಗಿದೆ:</u>

1. ಕಾರ್ಯನಿರ್ವಾಹಕ ಅಭಿಯಂತರರು(ವಿ), ಬೆವಿಕಂ. ನೆಲಮಂಗಲ ವಿಭಾಗ, ನೆಲಮಂಗಲ.

<u>ಪ್ರತಿಗಳು :</u>

- ಎಲ್ಲಾ ಶಾಖಾಧಿಕಾರಿಗಳು, ಬೆವಿಕಂ. ದೊಡ್ಡಬಳ್ಳಾಪುರ ನಗರ ಉಪವಿಭಾಗ, ದೊಡ್ಡಬಳ್ಳಾಪುರ.
- ಸಹಾಯಕ ಲೆಕ್ಕಾಧಿಕಾರಿಗಳು, ಬೆವಿಕಂ. ದೊಡ್ಡಬಳ್ಳಾಪುರ ನಗರ ಉಪವಿಭಾಗ, ದೊಡ್ಡಬಳ್ಳಾಪುರ.
- ಮುಖ್ಯ ಕಡತ